# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಕ್ಯಾತಘಟ್ಟ ಏತ ನೀರಾವರಿ ಯೋಜನೆಗೆ ಹೊಸ ಪಂಪು ಮತ್ತು ಮೋಟಾರ ಹಾಗೂ ಏರು ಕೊಳವೆ ಮಾರ್ಗವನ್ನು ಅಳವಡಿಸುವ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

** ** **

***ಓದಲಾಗಿದೆ:-***

1. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾನೀನಿನಿ/ತಾಂತ್ರಿಕ-2/ಎಂ.ಎಲ್.ಡಿ/92/2018-19/2518, ದಿನಾಂಕ: 10.10.2019.

***ಪ್ರಸ್ತಾವನೆ:-***

ಮೇಲೆ ಓದಲಾದ(1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ಇವರು ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕಿನಲ್ಲಿ ಬರುವ ಕ್ಯಾತಘಟ್ಟ ಏತ ನೀರಾವರಿ ಯೋಜನೆಯು ಸಣ್ಣ ನೀರಾವರಿ ಇಲಾಖೆಯಿಂದ ಅನುಷ್ಠಾನಗೊಂಡು ಜಲಸಂಪನ್ಮೂಲ ಇಲಾಖೆಗೆ ಹಸ್ತಾಂತರಿಸಲ್ಪಟ್ಟಿದ್ದು, ಈ ಏತ ನೀರಾವರಿ ಯೋಜನೆಯನ್ನು ಕ್ಯಾತಘಟ್ಟ ಗ್ರಾಮದ ಹತ್ತಿರ ಹೆಬ್ಬಳ್ಳಕ್ಕೆ ಅಡ್ಡಲಾಗಿ ಸೂಳೆಕೆರೆ ಉತ್ತರ ನಾಲೆಯ ಮಠದದೊಡ್ಡಿ ಮೈನರ್ ನ ಅಡಿಯಲ್ಲಿ ಬರುವ ಸುಮಾರು 1000 ಎಕರೆ ಬಾದಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸುವ ಉದ್ದೇಶದಿಂದ ನಿರ್ಮಿಸಲಾಗಿದ್ದು, ಈ ಯೋಜನೆಯಲ್ಲಿ 100 ಹೆಚ್.ಪಿ. ಸಾಮರ್ಥ್ಯದ ಮೂರು ಪಂಪ್ ಮತ್ತು ಮೋಟಾರುಗಳನ್ನು ಅಳವಡಿಸಿ ಪ್ರತಿಯೊಂದು ಮೋಟಾರುಗಳಿಗೆ ಪ್ರತ್ಯೇಕವಾಗಿ 450 ಎಂ.ಎಂ. ವ್ಯಾಸದ ಆರ್.ಸಿ.ಸಿ ಪೈಪು ಮೂಲಕ ನೀರನ್ನು ಲಿಫ್ಟ್ ಮಾಡಲು ಉದ್ದೇಶಿಸಲಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

2. ಸದರಿ ಏತ ನೀರಾವರಿ ಯೋಜನೆಗೆ ಅಳವಡಿಸಲಾಗಿರುವ ಪಂಪ್ ಮತ್ತು ಮೋಟಾರ್ ಗಳು ಸುಮಾರು 35 ವರ್ಷಗಳಷ್ಟು ಹಳೆಯದಾಗಿದ್ದು, ಪದೇ ಪದೇ ದುರಸ್ತಿಗೆ ಒಳಗಾಗುತ್ತಿದ್ದು. ಕೊಳವೆ ಮಾರ್ಗದ ಅನೇಕ ಜಾಯಿಂಟ್ ಗಳು ಶಿಥಿಲಗೊಂಡಿದ್ದು ನೀರು ಪೋಲಾಗುತ್ತಿದ್ದು, Manifold, Pressure relief valves, Air valve, Non return valve ಗಳು ಬಹುತೇಕ ತುಕ್ಕು ಹಿಡಿದಿರುವುದರಿಂದ ಈ ಯೋಜನೆಗೆ ಹೊಸದಾಗಿ ಪಂಪ್ ಹಾಗೂ ಮೋಟಾರ್ ಗಳನ್ನು ಅಳವಡಿಸುವುದು, ಏರು ಕೊಳವೆ ಮಾರ್ಗವನ್ನು ಬದಲಿಸುವುದು ಮತ್ತು Manifold, Pressure relief valves, Air valve, Non return valve ಗಳನ್ನು ಬದಲಾಯಿಸಿ ಯೋಜನೆಯನ್ನು ಪುನಃಶ್ಚೇತನಗೊಳಿಸುವುದು ಅತ್ಯವಶ್ಯಕವಾಗಿರುತ್ತವೆ. ಹೆಬ್ಬಳ್ಳದಲ್ಲಿ ನಿರಂತರ ಮರಳು ಗಣಿಗಾರಿಕೆಯಿಂದ ಹಳ್ಳದ ತಳಮಟ್ಟ ಕುಸಿದು ಸಾಮಾನ್ಯವಾಗಿ ನದಿಯಲ್ಲಿ ಹರಿವಿನ ಮಟ್ಟ ಇನ್ ಟೇಕ್ ವೆಲ್ ಪೈಪ್ ಮಟ್ಟದಿಂದ 618.60 ರಿಂದ 618.00 ಮೀಟರ್ ಕೆಳಭಾಗದಲ್ಲಿದೆ. ನೀರಿನ ಮಟ್ಟ ಹೆಚ್ಚಿಸಲು ಸದರಿ ಇನ್ ಟೇಕ್ ವೆಲ್ ನಿಂದ 50 ಮೀಟರ್ ದೂರದಲ್ಲಿ ಹೆಬ್ಬಳ್ಳಕ್ಕೆ ಹೊಸದಾಗಿ 2 ಮೀ ಎತ್ತರಕ್ಕೆ 55.00 ಮೀಟರ್ ಉದ್ದಕ್ಕೆ ಚೆಕ್ ಡ್ಯಾಂ ಹೊಸದಾಗಿ ನಿರ್ಮಿಸಲು ಹೊಸದಾಗಿ 105 ಹೆಚ್.ಪಿ.

ಸಾಮರ್ಥ್ಯದ ವಿ.ಟಿ.ಪಂಪ್ ಮತ್ತು ಮೋಟಾರ್ ಗಳನ್ನು ಅಳವಡಿಸಲು ಹಾಗೂ ಏರುಕೊಳವೆ ಮಾರ್ಗಕ್ಕೆ 700 ಮೀಟರ್ ಉದ್ದದ, 660 ಮಿಲಿ ಮೀಟರ್ ವ್ಯಾಸದ, 6.40 ಮಿ.ಮೀಟರ್ ದಪ್ಪದ ಎಂ.ಎಸ್. ಪೈಪ್ ಅಳವಡಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸುತ್ತಾ, ದಿನಾಂಕ: 20.09.2019 ರಂದು ನಡೆದ ಮಂಡಳಿಯ 70ನೇ ಸಭೆಯಲ್ಲಿ ಸದರಿ ಪ್ರಸ್ತಾವನೆಗೆ ಅನುಮೋದನೆ ಪಡೆದು ರೂ.4.97 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಇವರು ಕೋರಿರುತ್ತಾರೆ.

3. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಜಸಂಇ 46 ಎಂಎಂಕೆ 2019,**
**ಬೆಂಗಳೂರು, ದಿನಾಂಕ:26-11-2019**

ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಕ್ಯಾತಘಟ್ಟ ಏತ ನೀರಾವರಿ ಯೋಜನೆಗೆ ಹೊಸ ಪಂಪು ಮತ್ತು ಮೋಟಾರ ಹಾಗೂ ಏರು ಕೊಳವೆ ಮಾರ್ಗವನ್ನು ಅಳವಡಿಸುವ ರೂ.4.97 ಕೋಟಿ (ರೂಪಾಯಿ ನಾಲ್ಕು ಕೋಟಿ ತೊಂಭತ್ತೇಳು ಲಕ್ಷಗಳು ಮಾತ್ರ) ಗಳ ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: FD 01 TFP 2019, ದಿನಾಂಕ:04-07-2019, ರಲ್ಲಿ ಆಡಳಿತ ಇಲಾಖೆಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

26/11/19

(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2),
ಜಲ ಸಂಪನ್ಮೂಲ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನ), ಕರ್ನಾಟಕ , ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ನೀರಾವರಿ (ದಕ್ಷಿಣ) ವಲಯ, ಮೈಸೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.